ಪದಬಂಧ



ಎಡದಿಂದ ಬಲಕ್ಕೆ:

1. ಅಬ್ಬ, ಆತನ ಆದಾಯದಲ್ಲಿ ಎಂಥ ಮುನ್ನಡೆ ! (4)
3. ಪರಿವಾರದ ಹೊಸಬರಿಗೆಲ್ಲ ಬಿತ್ತು ಭಾರೀ ಏಟು (3)
4. ಜೊತೆಗಾರನ ಬಗೆಗೆ ಇರಲಿ ತುಂಬ ಜೋಪಾನ (3)
6. ಸಂದೇಶವನ್ನು ತಂದವನದು ಎಂತಹ ಸುಂದರ ರೂಪ ! (4)
7. ಪೆದ್ದರನ್ನು ಉದ್ಧಾರ ಮಾಡಲು ಬೇರೆಯವರ ಹಣವೇ ? (4)
8. ಬೇರೇನಾದರೂ ಏಕೆ ? ಕಷಾಯಕ್ಕೆ ಸಸ್ಯದಾರ ಮೂಲಿಕೆ ಸಾಕೇ ? (4)
10. ಸೇಡು ತೀರಿಸಲು ಹೋದವರಿಗೆ ಕಂಡದ್ದು ದೊಡ್ಡ ಜಲಪಾತ (4)
12. ತೃಪ್ತಿಯಾಯಿತು ಎನ್ನುವವರೆಗೂ ಕೌಶಲ್ಯ ತಯಾರಿ ನೀಡಲಾಗಿದೆ (4)
14. ಬಡವರ ಮುಂದೆ ಏಕಿಂಥ ಒಣ ಜಂಬದ ಮಾತು ? (4)
16. ಹೊಸ ದಾರಿ ಅಷ್ಟೇ ಅಲ್ಲ, ಬಹು ದೊಡ್ಡ ರಸ್ತೆ ಕೂಡ (3)
17. ವಿಚಾರವೇ ಇಲ್ಲದಿದ್ದರೂ ವಿಪರೀತ ಮಾತಾಡುವವ (3)
18. ದೇವತೆಯರನ್ನೂ ದ್ವೇಷಿಸುವಂಥ ಕೆಟ್ಟ ನಡವಳಿಕೆ (4)

ಮೇಲಿಂದ ಕೆಳಕ್ಕೆ:

1. ಅಸುರರ ರಾಜನನ್ನು ಬೇಗ ಹುಡುಕು (3)
2. ಯೋಜನೆಯ ಯಶಸ್ಸಿಗಾಗಿ ನಡೆದ ಯಾಗ (3)
3. ಪ್ರಸಿದ್ಧಿಯನ್ನು ಪಡೆದವನು ಬಳಸುವ ಅಲಂಕಾರ ಸಾಮಗ್ರಿ (4)
5. ರಾಜ್ಯವನ್ನು ಕಾಪಾಡಿದ್ದಕ್ಕೆ ಈ ಗೌರವದ ಕಾಣಿಕೆ (3)
7. ಪುಣ್ಯ ತರುವಂತಹ ಕೆಲಸಗಳಲ್ಲಿ ಆತ ಬಹಳ ನಿಷ್ಣಾತ (4)
9. ಸಹಿ ಹಾಕುವಂತಾಯಿತು; ಅದೇ ಸಾಕ್ಷ್ಯವಾಯಿತು (4)
11. ಹಲಸಿನ ಸಸಿ ನೆಡಬೇಕೆಂಬುದೇ ಎಲ್ಲರ ಅಭಿಪ್ರಾಯ (3)
13. ಬೇರುಗಳಿಗೂ ನೀರಿಲ್ಲ ಅಂಥ ಅಭಾವದ ಸಮಯ (4)
14. ದುಬಾರಿ ಬೆಲೆ ಮುಟ್ಟಿದರೂ ಎಲ್ಲ ಖಾಲಿಯಾಯಿತು (3)
15. ವ್ಯರ್ಥವಾದದ್ದನ್ನೆಲ್ಲ ಬಿಡದೆ ಬೇರೆಡೆಗೆ ಸಾಗಿಸಿದರೇ (3)

### 15-09-2016ರ ಉತ್ತರಗಳು

ಎಡದಿಂದ ಬಲಕ್ಕೆ :

1. ಅಸತ್ಯ 3. ಜವಾನಿ 4. ಜಿಲೇಬಿ 6. ಧನನಿಧಿ 7. ಪ್ರಾಣವಾಯು 9. ಕಿಡಿಕಾರು 11. ಪರಿಮಳ 15. ಗಡವ 16. ಬುರುಜು 17. ನಕುಲ

ಮೇಲಿಂದ ಕೆಳಕ್ಕೆ :

1. ಅನಿತ್ಯ 2. ತ್ಯಜಿಸು 3. ಜನನಿ 5. ಬಿನ್ನಾಣ 6. ಧಮಕಿ 8. ಯುಗಳ 10. ಕಾಳಗ 12. ರಿವಾಜು 13. ಪಾವನ 14. ತಂಬುಲ (=ತಾಂಬೂಲ)

## ಪ್ರಶ್ನಾ ೦ಕಣ

# ಐಸ್‌ಬರ್ಗ್‌ಗಳಲ್ಲಿ ಬಣ್ಣಗಳು ಹೇಗೆ ?

ಗ್ರೀನ್ ಲ್ಯಾಂಡ್ ಸನಿಹದ ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಮತ್ತು ಅಂಟಾರ್ಕ್ಟಿಕಾ ವನ್ನು ಪರಿವರಿಸಿರುವ ದಕ್ಷಿಣ ಸಾಗರದಲ್ಲಿ ಪರ್ವತಾಕಾರದ ತೇಲು ಹಿಮ ಬಂಡೆಗಳು ತುಂಬ ಸಾಮಾನ್ಯ. ಅವೇ ಐಸ್ ಬರ್ಗ್‌ಗಳು. ಹಿಮನದಿಗಳಿಂದ ಸಾಗಿಸಲ್ಪಟ್ಟು, ಹಿಮ ಚಾಚುಗಳಿಂದ ಕಳಚಲ್ಪಟ್ಟು ಕಡಲಿಗಿಳಿದು ತೇಲ ತೊಡಗುವ ಹಾಗೂ ವರ್ಷಾಂತರ ಕಾಲ ಕರಗದೆ ಉಳಿವ ದ್ವೀಪ ಸದೃಶವಾದ ಇಂತಹ ಹಲವಾರು ಐಸ್ ಬರ್ಗ್ ಗಳು ನೀರಿನಂತೆ ನಿರ್ವರ್ಣವಾಗಿರುವ ಬದಲು ನೀಲಿ, ಹಸಿರು, ಕೆಂಪು ಬಣ್ಣಗಳನ್ನೂ, ಕಪ್ಪು, ಕಂದು, ಹಳದಿ ಪಟ್ಟೆಗಳನ್ನೂ ಪ್ರದರ್ಶಿಸುತ್ತವೆ. ಅದೊಂದು ಬೆರಗುಗೊಳಿಸುವ ದೃಶ್ಯ. ಐಸ್ ಬರ್ಗ್ ಗಳ ಇಂತಹ ಬಣ್ಣಗಳಿಗೆ ಕಾರಣಗಳು ತುಂಬ ಕುತೂಹಲಕರ. ನೀವೇ ಗಮನಿಸಿ :

* ಸುರಿವ ಮಂಜಿನಿಂದ ಮೈದಳೆದು, ಕೆಲವೇ ನೂರು ವರ್ಷಗಳಷ್ಟೇ ವಯಸ್ಸಾದ ಹಿಮರಾಶಿಗಳ ಆಂತರ್ಯದಲ್ಲಿ ಸೂಕ್ಷ್ಮ ಗಾತ್ರದ ಅಸಂಖ್ಯ ಗಾಳಿ ಗುಳ್ಳೆಗಳು ತುಂಬಿರುತ್ತವೆ. ಇಂತಹ ಹಿಮಬಂಡೆಗಳು ಐಸ್ ಬರ್ಗ್ ಗಳಾದಾಗ ಅವುಗಳೊಳಗಿನ ಗಾಳಿ ಗುಳ್ಳೆಗಳು ಜಲಪಾತಗಳಲ್ಲಾಗುವಂತೆ ಸೂರ್ಯನ ಬೆಳಕನ್ನು ಎಲ್ಲ ದಿಕ್ಕುಗಳಿಗೂ ಚದುರಿಸಿಬಿಡುತ್ತವೆ. ಹಾಗಾಗಿ ಈ ವಿಧದ ಐಸ್ ಬರ್ಗ್ ಗಳು ಹಾಲಿನಂತೆ ಬೆಳ್ಳಗೆ ಕಾಣುತ್ತವೆ.

* ಅದೇ ಲಕ್ಷಾಂತರ ವರ್ಷ ಹಳತಾದ ಹಿಮ ಹಾಸುಗಳಿಂದ ರೂಪುಗೊಳ್ಳುವ ಐಸ್ ಬರ್ಗ್ ಗಳಲ್ಲಿ ಗಾಳಿ ಗುಳ್ಳೆಗಳು ಒಂದೂ ಉಳಿದಿರುವುದಿಲ್ಲ. ಹಾಗಾಗಿ ಆ ಬಗೆಯ ಐಸ್ ಬರ್ಗ್ ಗಳು ಸೂರ್ಯನ ಬೆಳಕಿನ ಸಪ್ತವರ್ಣಗಳ ಪೈಕಿ ನೀಲಿ ಘಟಕವನ್ನು ಮಾತ್ರ ಗರಿಷ್ಠ ಚದುರಿಸುತ್ತವೆ. ತತ್ಪರಿಣಾಮವಾಗಿ ತೀವ್ರ ಬಿಸಿಲಿನಲ್ಲಿ ನಿರಭ್ರ ಆಗಸ ಗಾಢ, ಉಜ್ವಲ ನೀಲಿ ವರ್ಣವನ್ನು ತಾಳುವಂತಹದೇ ವಿದ್ಯಮಾನದಿಂದ ಐಸ್




ಬರ್ಗ್ ನೀಲ ವರ್ಣದಿಂದ ಕಂಗೊಳಿಸುತ್ತದೆ. ( ಚಿತ್ರ 3 ).

* ನೆಲದಿಂದ ಕಡಲಿಗೆ ಚಾಚಿ ನಿಂತ ಹಿಮ ಚಾಚುಗಳ ಕೆಳಭಾಗಕ್ಕೆ ಆಕಸ್ಮಿಕವಾಗಿ ಕೆಲವು ಬಾರಿ ಶೈವಲಭರಿತ ಸಾಗರ ಜಲ ಹರಿದು ಬಂದು ಹಿಮಚಾಚಿಗೇ ಹೊಂದಿ ನಿಂತು ಕ್ಷಿಪ್ರವಾಗಿ ಹೆಪ್ಪುಗಟ್ಟುತ್ತದೆ. ಅಂತಹ ಹಿಮರಾಶಿಯಿಂದ ಕಳಚಿ ಮೈದಳೆದು ಉರುಳಿ ನಿಲ್ಲುವ ಐಸ್ ಬರ್ಗ್ ಗಳ ಮೇಲೆ ಕವಚದಂತೆ ಶೈವಲ ಬೆರೆತ ಹಿಮ ಪದರವೊಂದು ಹರಡಿ ನಿಲ್ಲುವುದರಿಂದ ಇಡೀ ಐಸ್ ಬರ್ಗ್ ಹಸಿರು ಬಣ್ಣವನ್ನು ತಳೆಯುತ್ತದೆ ( ಚಿತ್ರ 2 ).

* ಬೃಹತ್ ಐಸ್ ಬರ್ಗ್ ಗಳ ಮೇಲ್ಮೈಯಲ್ಲಿ ಶಕ್ತಿ ಶಾಲೀ ಸಾಗರದಲೆಗಳು ಹಳ್ಳ ಕೊಳ್ಳಗಳನ್ನು, ಆಳವಾದ ಉದ್ದುದ್ದ ಸಮಾಂತರ ನಾಲೆಗಳನ್ನೂ ಕೊರೆಯುತ್ತವೆ. ಯೋಗಾ ಯೋಗದಿಂದ ಅಂತಹ ತಗ್ಗುಗಳಲ್ಲಿ ಮಣ್ಣು, ಮರಳು, ಖನಿಜಗಳು ಅಥವಾ ವಿಭಿನ್ನ ವರ್ಣಗಳ ಸಾವಯವ ವಸ್ತುಗಳು ಬೆರೆತ ನೀರು ಸಂಗ್ರಹಗೊಂಡು ಘನ ರೂಪ ತಳೆದಾಗ ಆಯಾ ವಸ್ತುಗಳ ಬಣ್ಣಗಳದೇ ಪಟ್ಟೆಗಳು ರೂಪುಗೊಳ್ಳುತ್ತವೆ ( ಚಿತ್ರ 1 ).

ಮೂಡುವ ಪರಿ ಹೇಗೇ ಇರಲಿ, ಐಸ್ ಬರ್ಗ್‌ಗಳು ಪ್ರದರ್ಶಿಸುವ ವರ್ಣ ಚಿತ್ತಾರಗಳ ದೃಶ್ಯಗಳಂತೂ ಅತ್ಯದ್ಭುತ.

■ ಎನ್. ವಾಸುದೇವ್